**ಈ ವಾರದ ಪಾಠವನ್ನು ಸಬ್ಬತ್ತಿಗಾಗಿ ಅಧ್ಯಯನ ಮಾಡಿರಿ, ಜನವರಿ 6 .**

**ಪಾಠ 1** **ಡಿಸೆಂಬರ್ 30–ಜನವರಿ 5**

# ಭೌತಿಕವಾದದ ಪ್ರಭಾವ

ಸಬ್ಬತ್ತಿನ ಮಧ್ಯಾಹ್ನ: ಈ ವಾರದ ಪಾಠದ ಅಧ್ಯಯನಕ್ಕಾಗಿ 1 ಯೋಹಾನ 2:16, 17; ಲೂಕ 14:26–33; 12:15–21; ಧರ್ಮೋಪದೇಶಕಾಂಡ 8:10–14; 1 ತಿಮೋಥಿ 6:10; ಯೋಹಾನ 15:5; ಗಲಾತ್ಯ 2;20.

ಸ್ಮರಣ ವಾಕ್ಯ: **"ಇಹಲೋಕದ ನಡುವಳಿಕೆಯನ್ನು ಅನುಸರಿಸದೆ ನೂತನಮನಸ್ಸನ್ನು ಹೊಂದಿಕೊಂಡು ಪರಲೋಕಭಾವದವರಾಗಿರಿ ಹೀಗಾದರೆ ದೇವರ ಚಿತ್ತಾನುಸಾರವಾದದ್ದು ಅಂದರೆ ಉತ್ತಮವಾದದ್ದೂ ಮೆಚ್ಚಿಕೆಯಾದದ್ದೂ ದೋಷವಿಲ್ಲದ್ದೂ ಯಾವ ಯಾವದೆಂದೂ ವಿವೇಚಿಸಿ ತಿಳುಕೊಳ್ಳುವಿರಿ."** (ರೋಮಾ 12:2)

ದೇವರ ವಾಕ್ಯವು ಆತನ ಮಕ್ಕಳು "ಇಹಲೋಕದ ನಡುವಳಿಕೆಯನ್ನು ಅನುಸರಿಸದೆ" (ರೋಮಾ 12:2) ಇರಬೇಕೆಂದು ಬಯಸುತ್ತದೆ, ಆದರೆ ಭೌತಿಕವಾದದ ಪಾಶವು, ಆಸ್ತಿಯನ್ನು ಸಂಪಾದಿಸಬೇಕು ಎಂಬ ಆಶೆ ಹುಟ್ಟಿಸಿ ಮತ್ತು ಹಣ ನಮಗೆ ಕೊಡುವ ಸುಖಗಳು ಬಹಳ ಶಕ್ತಿಶಾಲಿಯಾಗಿದ್ದು ನಮ್ಮನ್ನು ಸೆಳೆಯುತ್ತವೆ. ಕೆಲವೇ ಜನರು ಶ್ರೀಮಂತರಾಗಲಿ ಅಥವಾ ಬಡವರಾಗಲಿ ಅವರು ಭೌತಿಕವಾದದ ಸುಳಿಗೆ ಸಿಲುಕುವುದಿಲ್ಲ ಇವರಲ್ಲಿ ಕ್ರೈಸ್ತರು ಕೂಡ ಸೇರಿದ್ದಾರೆ.

ಶ್ರಿಮಂತರಾಗಿರುವುದು ತಪ್ಪಲ್ಲ ಅಥವಾ ನಮ್ಮ ಹಾಗೂ ನಮ್ಮನ್ನು ಪ್ರೀತಿಸುವವರ ಸೌಕರ್ಯಕ್ಕಾಗಿ ಒಂದು ಹೆಜ್ಜೆ ಮುಂದೆ ಹೋಗಿ ದುಡಿಯುವುದು ಕೂಡ ತಪ್ಪಲ್ಲ. ಆದರೆ ಹಣ ಅಥವಾ ಹಣವನ್ನು ಗಳಿಸುವುದರ ಹಿಂದೆ ಬೀಳುವುದು ನಮ್ಮ ಏಕೈಕ ಉದ್ದೇಶವಾದಾಗ ನಾವು ಸೈತಾನನ ಬಲೆಗೆ ಬೀಳುತ್ತೇವೆ ಮತ್ತು ನಿಶ್ಚಯವಾಗಿ "ಇಹಲೋಕದ ನಡುವಳಿಕೆಯನ್ನು" ಅನುಸರಿಸುವವರಾಗಿದ್ದೇವೆ.

ಒಳ್ಳೆಯ ಜೀವನ, ಸಮೃದ್ಧಿಯ ಜೀವನ ಕೇವಲ ಹಣದ ಮೂಲಕ ಮಾತ್ರ ಸಾಧ್ಯ ಎಂದು ಲೋಕವು ನಮಗೆ ತಿಳಿಸುತ್ತದೆ. ಆದರೆ ಹಣವು ಸೈತಾನನ ಒಂದು ಮುಖವಾಡವಾಗಿದ್ದು ಅದರ ಮೂಲಕ ನಾವು ಆತನ ಜೊತೆ ಪಾಲುಗಾರರಾಗುವಂತೆ

ಮಾಡುತ್ತದೆ. ಭೌತಿಕವಾದವು ಸೈತಾನನು ಕ್ರೈಸ್ತರ ವಿರುದ್ಧವಾಗಿ ಉಪಯೋಗಿಸುವ ಆಯ್ಕೆಯ ಅಸ್ತ್ರವಾಗಿದೆ. ಯಾರು ತಾನೇ ಹಣ ಮತ್ತು ಅದು ಈಗ ತರುವ ಆನಂದವನ್ನು ಇಷ್ಟ ಪಡುವುದಿಲ್ಲ? ಹಣದ ಒಂದು ದೊಡ್ಡ ಸಾಧನೆಯೆಂದರೆ ಅದು ತರುವ ತಾತ್ಕಾಲಿಕ ತೃಪ್ತಿ, ಆದರೆ ಅದು ನಮ್ಮ ಆಳವಾದ ಆಧ್ಯಾತ್ಮಿಕ ಅವಶ್ಯಕತೆಗೆ ಉತ್ತರ ನೀಡುವುದಿಲ್ಲ.

**ಪಾಠ 1 ಭೌತಿಕವಾದದ ಪ್ರಭಾವ ಡಿಸೆಂಬರ್ 30–ಜನವರಿ 5**

**ಭಾನುವಾರ ಡಿಸೆಂಬರ್ 31**

## ಈ ಲೋಕದ ದೇವರು

ಹಣ ಈ ಲೋಕದ ದೇವರಾಗಿದೆ ಮತ್ತು ಭೌತಿಕವಾದವು ಅದರ ಧರ್ಮವಾಗಿದೆ. ಭೌತಿಕವಾದ ವ್ಯವಸ್ಥಿತವಾಗಿದ್ದು ಮತ್ತು ಕಪಟವಾದ ವ್ಯವಸ್ಥೆಯಾಗಿದೆ ಅದು ತಾತ್ಕಾಲಿಕವಾದ ಸುರಕ್ಷತೆಯನ್ನು ನೀಡುತ್ತದೆ ಆದರೆ ಅಂತಿಮವಾದ ಸುರಕ್ಷತೆಯನ್ನು ನೀಡುವುದಿಲ್ಲ.

ಭೌತಿಕವಾದ, ಅದನ್ನು ನಾವು ಇಲ್ಲಿ ವಿವರಿಸುವ ಹಾಗೆ ಹಣದ ಆಸೆಯು ಆಸ್ತಿಯ ಅಸೆಗಳಿಗೆ ಮತ್ತು ಸ್ವಾಧೀನ ಪಡಿಸಿಕೊಳ್ಳುವ ತವಕವು ಆಧ್ಯಾತ್ಮಿಕ ವಿಚಾರಗಳಿಗಿಂತ ಹೆಚ್ಚಿನ ಪ್ರಾಮುಖ್ಯತೆಯನ್ನು ಪಡೆಯುವುದಾಗಿದೆ. ಸ್ವಾಧೀನ ಪಡಿಸಿಕೊಳ್ಳುವ ವಸ್ತುಗಳು ಬೆಲೆ ಬಾಳುವವುಗಳಾಗಿರಬಹುದು, ಆದರೆ ಅವುಗಳ ಬೆಲೆಯು ನಮ್ಮನ್ನು ಸ್ವಾಧೀನ ಪಡಿಸಿಕೊಳ್ಳಬಾರದು: 'ಬೆಳ್ಳಿಯನ್ನು ಆಶಿಸುವವನಿಗೆ ಎಷ್ಟು ಬೆಳ್ಳಿಯಿಂದಲೂ ತೃಪ್ತಿಯಾಗದು: ಸಮೃದ್ಧಿಯನ್ನು ಬಯಸುತ್ತಲೇ ಇರುವವನಿಗೆ ಆದಾಯವೆಷ್ಟಿದ್ದರೂ ಸಾಲದು. (ಪ್ರಸಂಗಿ 5:10). ಈ ಲೋಕದ ವಸ್ತುಗಳನ್ನು ಇಷ್ಟ ಪಡುವುದರ ಹಿಂದೆ ಇರುವುದರ ಸಮಸ್ಯೆ ಇದಾಗಿದೆ. ನಮಗೆ ಎಷ್ಟೇ ಸಿಕ್ಕಿದರೂ ಕೂಡ ಅದು ಸಾಲದು; ಹೆಚ್ಚು ಹೆಚ್ಚು ಸಂಪಾದಿಸಲು ನಾವು ಬಯಸುತ್ತೇವೆ ಮತ್ತು ಅದರಿಂದ ನಾವು ಎಂದಿಗೂ ಕೂಡ ತೃಪ್ತಿಯಾಗುವುದಿಲ್ಲ. ಬೆಲೆಯ ಬಗ್ಗೆ ಮಾತನಾಡಿರಿ!

1 ಯೋಹಾನ 2:16, 17 ಓದಿರಿ ಈ ವಾಕ್ಯವು ಕೊನೆಗೆ ಯಾವುದು ಮುಖ್ಯವಾಗುತ್ತದೆ ಎಂದು ತಿಳಿಸುತ್ತದೆ.?



---

ಲೂಕ 14:26–33 ಓದಿರಿ ಯೇಸುವು ಇಲ್ಲಿ ಏನು ಹೇಳುತ್ತಾನೆ, ಇಲ್ಲಿಯೂ ಕೂಡ ಕ್ರೈಸ್ತರಿಗೆ ಯಾವುದು ಬಹಳ ಪ್ರಾಮುಖ್ಯವಾಗುತ್ತದೆ ಎಂದು ತಿಳಿಸುತ್ತಾನೆ?

---

ಇದನ್ನು ನಾವು ಹೀಗೆ ಹೇಳಬಹುದು: ಯಾರಿಗೆ ಹಣ ಮತ್ತು ಹಣದ ಆಸೆಯು ಎಲ್ಲಾದಕ್ಕಿಂತಲೂ ಮಿಗಿಲಾದ ವಾಸ್ತವವಾದಾಗ ಅದರ ಬೆಲೆಯನ್ನು ಲೆಕ್ಕ ಹಾಕಬೇಕು. "ಒಬ್ಬ ಮನುಷ್ಯನು ಲೋಕವನ್ನೆಲ್ಲಾ ಸಂಪಾದಿಸಿಕೊಂಡರೂ ಪ್ರಾಣ ನಷ್ಟ ಪಟ್ಟರೆ ಅವನಿಗೆ ಪ್ರಯೋಜನವೇನು" (ಮಾರ್ಕ 8:36).

ಕ್ರಿಸ್ತನು ಈ ಲೋಕಕ್ಕೆ ಬಂದಾಗ ಮಾನವತೆಯು ಅತ್ಯಂತ ಕೆಳಮಟ್ಟಕ್ಕೆ ತಲುಪಿತ್ತು. ಸಮಾಜದ ಅಡಿಪಾಯಗಳು ಅಪಾಯದ ಹಂತವನ್ನು ತಲುಪಿದ್ದವು. ಜೀವನವು ಸುಳ್ಳು ಮತ್ತು ಕೃತಕವಾಗಿತ್ತು.... ಲೋಕದ ಎಲ್ಲಾ ಕಡೆಯಲ್ಲಿಯೂ ಕೂಡ ಧರ್ಮವು ಮನಸ್ಸಿನ ಮತ್ತು ಆತ್ಮದ ಮೇಲಿನ ಹತೋಟಿಯನ್ನು ಕಳೆದುಕೊಂಡಿತ್ತು. ಕೃತಕ ಮತ್ತು ಸುಳ್ಳುಗಳಿಂದ ಬೇಸೆತ್ತು ಜನರು ದಾಂಪತ್ಯ ದ್ರೋಹ ಮತ್ತು ಭೌತಿಕವಾದದ ಕಡೆಗೆ ತಿರುಗಿಕೊಂಡಿದ್ದರು. ನಿತ್ಯತ್ವವನ್ನು ಅವರ ಗಣನೆಗೆ ತೆಗೆದುಕೊಳ್ಳದೆ ಅವರು ಕೇವಲ ವರ್ತಮಾನದಲ್ಲಿ ಮಾತ್ರ ಜೀವಿಸುತ್ತಿದ್ದರು. ಎಲೆನ್ ಜಿ ವೈಟ್ ಎಜುಕೇಶನ್ ಪುಟ 74, 75.

ಜನರು ದಾಪಂತ್ಯ ದ್ರೋಹ ಮತ್ತು ಭೌತಿಕವಾದದ ಕಡೆಗೆ ತಿರುಗಿಕೊಂಡಿದ್ದರು. ನಿತ್ಯತ್ವವನ್ನು ಅವರ ಅವಗಹಣೆಗೆ ತೆಗೆದುಕೊಳ್ಳದೆ ಅವರು ಕೇವಲ ವರ್ತಮಾನದಲ್ಲಿ ಮಾತ್ರ ಜೀವಿಸುತ್ತಿದ್ದರು ಇದು ಪರಿಚಿತವಾದ ವಿಷಯವೆಂದು ಅನಿಸುವುದಿಲ್ಲವೇ?

ಯಾರು ತಾನೇ ವಸ್ತುಗಳನ್ನು ಹೊಂದಲು ಬಯಸುವುದಿಲ್ಲ? ಆದರೆ ಪ್ರಶ್ನೆ ಏನೆಂದರೆ: ನಾವು ಹೊಂದಿರುವ ವಸ್ತುಗಳು ಅವು ಬಹಳ ಇಲ್ಲದಿದ್ದರೂ ಕೂಡ ಅವು ನಮ್ಮನ್ನು ಹೊಂದಿರುತ್ತವೆ ನಾವು ನಮ್ಮ ಸ್ವಂತವಾಗಿರಬೇಕು ಇದನ್ನು ದೇವರು ಹೇಗೆ ನಮ್ಮ ಜೀವನದಲ್ಲಿ ನೆರವೇರಿಸುತ್ತಾನೆ?

**ಪಾಠ 1 ಭೌತಿಕವಾದದ ಪ್ರಭಾವ ಡಿಸೆಂಬರ್ 30–ಜನವರಿ 5**

**ಸೋಮವಾರ ಜನವರಿ 1**

## ಕಣಜಗಳನ್ನು ತುಂಬಿಕೊಳ್ಳುವುದು

ಲೂಕ 12:15–21 ಓದಿರಿ ಇಲ್ಲಿ ನಮಗೆ ನೀಡಲಾಗಿರುವ ಸಂದೇಶವೇನು?ಇಲ್ಲಿ ನೀಡಲಾಗಿರುವ ನಿಯಮವು ವಿಶೇಷವಾಗಿ ಶ್ರೀಮಂತರಲ್ಲದ ನಮಗೆ ಹೇಗೆ ಅನ್ವಯವಾಗುತ್ತದೆ.

________________________________________

________________________________________

ನಾವು ಶ್ರೀಮಂತರೋ ಅಥವಾ ಬಡವರೋ ಈ ಲೋಕದ ಶಾಶ್ವತವಲ್ಲದ ಮತ್ತು ಕೃತಕವಾದ ವಸ್ತುಗಳ ಮೇಲಿನ ಆಸೆಯು ನಮ್ಮನ್ನು ನಿತ್ಯತ್ವದ ಮೇಲಿನ ಗಮನವನ್ನು ಕಳೆದುಕೊಳ್ಳುವ ಕಡೆಗೆ ಸೆಳೆಯುವ ಎಳೆಯುತ್ತದೆ ಎಂಬುದನ್ನು ನಾವು ಗಮನಿಸಬೇಕಾಗಿದೆ.

ಈ ದಿನಗಳಲ್ಲಿ ನಾವು ಬಂಗಾರದ ಅಥವಾ ಬೆಳ್ಳಿಯ ವಿಗ್ರಹದ ಮುಂದೆ ಅಡ್ಡ ಬಿಳದೆ ಇರಬಹುದು. ಅದರೂ ಕೂಡ ನಾವು ಬೆಳ್ಳಿ ಮತ್ತು ಬಂಗಾರವನ್ನು ಬೇರೆ ರೂಪದಲ್ಲಿ ಆರಾಧಿಸುವ ಅಪಾಯದಲ್ಲಿದ್ದೇವೆ.

ಜೀವನವನ್ನು ಆಸ್ತಿ ಸಂಪಾದಿಸಲು ಮಾತ್ರ ಮುಡುಪಾಗಿಡುವ ಜನರಿರುವ ಪ್ರಪಂಚದ ಅನೇಕ ಭಾಗಗಳಲ್ಲಿ ಈ ಸಾಮ್ಯವು ಬಹಳ ಪ್ರಸ್ತುತವಾಗಿದೆ. ಚಿಲ್ಲರೆ ವ್ಯಾಪಾರಿಗಳು ತಮ್ಮ ಸುಲಿಗೆತನವನ್ನು ಒಂದು ಕಲೆಯಾಗಿ ಜಾಗತಿಕ ಮಟ್ಟದಲ್ಲಿ ಪ್ರಚಾರ ಮಾಡಿದ್ದಾರೆ. ಅವರ ಇಡೀ ವ್ಯಾಪಾರೀಕರಣದ ಸೂತ್ರವು ಅವರು ಮಾರುವ ವಸ್ತುಗಳನ್ನು ಕೊಳ್ಳದೆ ಇದ್ದರೆ ನಮ್ಮ ಜೀವನವು ಸುಖಮಯವಾಗಿರುವುದಿಲ್ಲ ಎಂಬ ಭಾವನೆಯನ್ನು ನಮ್ಮಲ್ಲಿ ತರುವುದರ ಮೇಲೆ ಅವಲಂಬಿತವಾಗಿದೆ. ಒಂದು ಯಶಸ್ವಿಯಾದ ಸಂಸ್ಥೆಯು ಒಂದು ವಸ್ತುವನ್ನು ಹೊರತಂದಿತು, ಅದು ನಮಗೆ ಬಹಳ ಅವಶ್ಯಕತೆ ಇದೆ ಎಂಬಂತೆ ಅದನ್ನು ಬಿಂಬಿಸಿತು, ಮತ್ತು ಅದನ್ನು ನಮಗೆ ಮಾರಿತು. ಆದರೆ ಸತ್ಯವೇನೆಂದರೆ: ಅದು ಯಶಸ್ವಿಯಾಯಿತು! ಈ ಲೋಕದ ಮೇಲೆ ಯಾವ ನಿರೀಕ್ಷೆಯನ್ನು ಇಟ್ಟುಕೊಳ್ಳದ



ಅಂಥಹಾ ಕ್ರೈಸ್ತರೂ ಕೂಡ ಇಂತಹ ಮೊಸಗಳಿಂದ ಸುರಕ್ಷಿತರಲ್ಲ.

ಧರ್ಮೋಪದೇಶಕಾಂಡ 8:10–14 ನ್ನು ಓದಿರಿ ಇಲ್ಲಿ ನೀಡಲಾಗಿರುವ ಬೆದರಿಕೆಗಳಿಂದ ಸಭಿಕರು ಯಾವ ರೀತಿಯಾದ ಅಪಾಯವನ್ನು ಎದುರಿಸಬಹುದು?

________________________________________

ಐಶ್ವರ್ಯವನ್ನು ಹೊಂದಿದ ನಂತರ ವ್ಯಕ್ತಿಯ ಜೀವನದಲ್ಲಿ ಆಧ್ಯಾತ್ಮಿಕತೆ, ದೇವರ ಬಗೆಗಿನ ಪ್ರೀತಿ ಮತ್ತು ಪರಲೋಕದ ಹಾಗೂ ಆತ್ಮೀಯ ವಿಚಾರಗಳ ಮೇಲಿನ ಆಸಕ್ತಿಯನ್ನು ಹೆಚ್ಚಿಸಿದೆ ಎಂಬ ವಿಚಾರದಲ್ಲಿ ಲೋಕದಲ್ಲಿ ಅಥವಾ ಸತ್ಯವೇದದಲ್ಲಿ ಕಂಡು ಬರುವ ಉದಾಹರಣೆಗಳನ್ನು ನಮ್ಮ ತರಗತಿಯ ಜೊತೆಯಲ್ಲಿ ಹಂಚಿಕೊಳ್ಳಿರಿ.

**ಪಾಠ 1 ಭೌತಿಕವಾದದ ಪ್ರಭಾವ ಡಿಸೆಂಬರ್ 30–ಜನವರಿ 5**

**ಮಂಗಳವಾರ ಜನವರಿ 2**

## ಭೌತಿಕವಾದದ ಆಸೆ

ಜಾಹಿರಾತು ಪ್ರಪಂಚವು ಬಹಳ ಶಕ್ತಿಶಾಲಿಯಾಗಿದೆ. ಸಂಸ್ಥೆಗಳು ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಅವರ ವಸ್ತುಗಳ ಚಿತ್ರಗಳನ್ನು ನಮ್ಮ ಮುಂದೆ ಇಡುತ್ತಾರೆ. ಅವರು ಮಾರುವ ವಸ್ತುಗಳನ್ನು ಪ್ರಚಾರ ಮಾಡಲು ಸುಂದರವಾದ ಮತ್ತು ಆಕರ್ಷಕ ವ್ಯಕ್ತಿಗಳನ್ನು ಉಪಯೋಗಿಸುತ್ತಾರೆ. ನಾವು ಜಾಹಿರಾತುಗಳನ್ನು ನೋಡಿ ಅದರಲ್ಲಿ ನಮ್ಮನ್ನು ನಾವು ನೋಡಿಕೊಳ್ಳುತ್ತೇವೆ, ಅದರಲ್ಲೂ ಕೂಡ ಕೇವಲ ವಸ್ತುಗಳ ಜೊತೆಯಲ್ಲಿ ಮಾತ್ರವಲ್ಲದೆ ಆ ವ್ಯಕ್ತಿಗಳ ಜೊತೆಯಲ್ಲಿ ನಮ್ಮನ್ನು ನಾವು ಗುರುತಿಸಿಕೊಳ್ಳುತ್ತೇವೆ.

ಸೂಕ್ಷ್ಮವಾದ (ಕೆಲವೊಮ್ಮೆ ಸೂಕ್ಷ್ಮವಲ್ಲದ) ಜಾಹಿರಾತುಗಳು ಇಲ್ಲದೆ ಹೋಗಿದ್ದರೆ ಭೌತಿಕವಾದವು ಇಷ್ಟೊಂದು ಪ್ರಸಿದ್ದಿಯನ್ನು ಪಡೆಯುತ್ತಿರಲಿಲ್ಲ. ಜಾಹಿರಾತಿನ ಶಕ್ತಿಶಾಲಿಯಾದ ತಂತ್ರಜ್ಞಾನದಿಂದ ಭೌತಿಕವಾದವು ಲೋಕದ ಆಶೆಗಳ ವಿರುದ್ದ ಹೋರಾಡುತ್ತಿರುವ ನಮ್ಮಂತಹ ಅನೇಕ ಕ್ರೈಸ್ತರ ಪಾಲಿಗೆ ವಿಷವಾಗಿ ಪರಿಣಮಿಸಿದೆ.

ಮತ್ತಾಯ 6:22–24 ನ್ನು ಓದಿರಿ ಕ್ರೈಸ್ತರ ಆಲೋಚನೆ ಮತ್ತು ಕ್ರಿಯೆಗಳಲ್ಲಿ ಕಣ್ಣು

ಏನನ್ನು ಪ್ರತಿನಿಧಿಸುತ್ತದೆ ನಮಗೆ ಅವಶ್ಯಕತೆ ಇಲ್ಲದೆ ವಸ್ತುಗಳನ್ನು ಹೊಂದಲು ಸೂಕ್ಷ್ಮವಾದ ಚಿತ್ರಪಟಗಳ ವಿಚಾರದಲ್ಲಿ ಕ್ರೈಸ್ತರಾದ ನಾವು ಹೇಗೆ ಪ್ರತಿಕ್ರಿಯಿಸಬೇಕು.?

---

ಚಿಲ್ಲರೆ ವ್ಯಾಪಾರಿಗಳ ವಸ್ತುಗಳ ಕಡೆಗೆ ಸೆಳೆಯುವ ಜಾಹಿರಾತುಗಳು ಶಕ್ತಿಶಾಲಿಯಾದ ಸಾಧನಗಳಾಗಿವೆ. ಕೊಂಡುಕೊಳ್ಳುವವರ ಮನಸ್ಸಿನಲ್ಲಿ ಉತ್ಸಾಹವನ್ನು ಹುಟ್ಟಿಸಿ ವ್ಯಾಪಾರಿಗಳು ತಮ್ಮ ವಸ್ತುಗಳನ್ನು ಮಾರುತ್ತಾರೆ. ಅದರ ಅನುಭವ ಕೇವಲ ಕಲ್ಪನೆಯಾಗಿರುತ್ತದೆ. ಆದರೆ ಅದು ಕೆಲಸ ಮಾಡುತ್ತದೆ. ಅದು ಕೇವಲ ಅತಿಯಿಂದ್ರಿಯವಾಗಿರುತ್ತದೆ, ಜನರನ್ನು ಜಾರುವಂತೆ ಮಾಡಿ ಅವರನ್ನು ಇನ್ನೊಂದು ಲೋಕದಲ್ಲಿ ಇರುವಂತೆ ಮಾಡುತ್ತದೆ. ಇದೊಂದು ಸುಳ್ಳು ಧರ್ಮವಾಗಿ ಪರಿವರ್ತನೆಗೊಂಡು ಅದರಲ್ಲಿ ಜ್ಞಾನ ಮತ್ತು ಆತ್ಮೀಯ ಸತ್ಯ ಇಲ್ಲದಿದ್ದರೂ ಕೂಡ ಆ ಕ್ಷಣಕ್ಕೆ ಆಕರ್ಷಣೆಯನ್ನು ಮತ್ತು ಆಸೆಯನ್ನು ಹುಟ್ಟಿಸುತ್ತದೆ ಅದ್ದರಿಂದ ಅನೇಕರು ಅದನ್ನು ತಿರಸ್ಕರಿಸುವುದಿಲ್ಲ. ನಮಗೆ ಅದು ಬೇಕು, ಅದಕ್ಕೆ ನಾವು ಅರ್ಹರು ಎಂದು ನಾವು ಭಾವಿಸುತ್ತೇವೆ, ಅದ್ದರಿಂದ ನಾವು ಯಾಕೆ ಅದನ್ನು ಪಡೆಯಬಾರದು? ನಮಗೆ ಬೇಡದಿರುವ ವಸ್ತುಗಳನ್ನು ಪಡೆದುಕೊಳ್ಳುವಲ್ಲಿ ಜಾಹಿರಾತು ಸಂಸ್ಥೆಗಳು ನಮ್ಮಿಂದ ವ್ಯಯಿಸಿದ ಹಾಗೂ ಇನ್ನೂ ವ್ಯಯಿಸುತ್ತಿರುವ ಹಣದ ಮೊತ್ತ ದೇವರಿಗೆ ಮಾತ್ರ ಗೊತ್ತಿದೆ.

"ನಾನು ಹೇಳುವುದೇನೆಂದರೆ ಪವಿತ್ರಾತ್ಮನನ್ನು ಅನುಸರಿಸಿ ನಡೆದುಕೊಳ್ಳಿರಿ ಆಗ ನೀವು ಶರೀರಭಾವದ ಅಭಿಲಾಷೆಗಳನ್ನು ಎಷ್ಟು ಮಾತ್ರಕ್ಕೂ ನೆರವೇರಿಸುವುದಿಲ್ಲ" (ಗಲಾತ್ಯ 5:16) ನಾವು 'ಶರೀರಭಾವದ ಅಭಿಲಾಷೆಗಳ' ಕುರಿತಾಗಿ ಆಲೋಚಿಸುವಾಗ ಬರೀ ಲೈಂಗಿಕ ವಿಚಾರವಾಗಿ ಮಾತ್ರ ಆಲೋಚಿಸುತ್ತೇವೆ, ಆದರೆ ಬೇರೆ ಯಾವ ಯಾವ ರೀತಿಯಲ್ಲಿ ಈ ಅಭಿಲಾಷೆಗಳನ್ನು ಪೂರೈಸಿಕೊಳ್ಳುವ ಅಪಾಯದಲ್ಲಿ ನಾವು ಇದ್ದೇವೆ.

**ಪಾಠ 1 ಭೌತಿಕವಾದದ ಪ್ರಭಾವ ಡಿಸೆಂಬರ್ 30–ಜನವರಿ 5**

**ಬುಧವಾರ ಜನವರಿ 3**

## ಸ್ವಾರ್ಥದ ಪ್ರೀತಿ

"ದೇವರು ನನಗೆ ಕೃಪೆ ಮಾಡಿದ ಸೇವೆಯನ್ನು ನಡಿಸಿ ನಿಮ್ಮಲ್ಲಿ ಒಬ್ಬೊಬ್ಬನಿಗೂ



ಹೇಳುವದೇನಂದರೆ ಯಾರೂ ತನ್ನ ಯೋಗ್ಯತೆಗೆ ಮೀರಿ ತನ್ನನ್ನು ಭಾವಿಸಿಕೊಳ್ಳದೆ ದೇವರು ಒಬ್ಬೊಬ್ಬನಿಗೆ ಎಂಥೆಂಥ ವಿಶ್ವಾಸ ಬಲವನ್ನು ಕೊಟ್ಟನೋ ಅದಕ್ಕೆ ತಕ್ಕ ಹಾಗೆ ನ್ಯಾಯವಾದ ಅಭಿಪ್ರಾಯದಿಂದ ತನ್ನನ್ನು ಭಾವಿಸಕೊಳ್ಳಬೇಕು." (ರೋಮ 12:3)

"ನೀನು ನಿನ್ನ ಸೊಬಗಿನ ನಿಮಿತ್ತ ಉಬ್ಬಿದ ಮನಸ್ಸುಳ್ಳವನಾಗಿ ನನ್ನ ಮೆರೆತದಿಂದ ನನ್ನ ಬುದ್ಧಿಯನ್ನು ಹಾಳುಮಾಡಿಕೊಂಡಿ." (ಯೆಹೆಜ್ಕೇಲ28:17) ಎಂದು ದೇವರು ಹೇಳುತ್ತಾನೆ. ಲೂಸಿಫರನು ತನ್ನನ್ನು ತಾನೇ ಮೋಸಗೊಳಿಸಿಕೊಂಡನು ಅವನು ತನ್ನ ಹೃದಯದಲ್ಲಿ "ಉನ್ನೋತೊನ್ನತನಿಗೆ ಸರಿಸಮಾನನಾಗುವೇನು?" (ಯೆಶಾಯ 14:14) ಎಂದುಕೊಂಡಾಗ ವಾಸ್ತವಕ್ಕಿಂತ ಹೆಚ್ಚಾಗಿ ಊಹಿಸಿಕೊಂಡನು. ಅವನು ಸ್ವಾರ್ಥ ಉದ್ದೇಶವನ್ನು ಬಹಿರಂಗ ಪಡಿಸಿದನು, ಅವನಗೆ ಸೇರದ ವಸ್ತುಗಳ ಮೇಲೆ ಅಧಿಕಾರವನ್ನು ಹೊಂದಲು ಬಯಸಿದನು. ತನ್ಮೆಚ್ಚುಗೆ ಮತ್ತು ಸ್ವಾರ್ಥ ಉದ್ದೇಶ ಈ ಎರಡೂ ಕೂಡ ಬಿದ್ದು ಹೋದ ಸೈತಾನನ ಹೃದಯದ ಲಕ್ಷಣಗಳಾಗಿವೆ.

ಲೂಸಿಫರನ ಕುರಿತಾದ ಈ ವಚನಗಳು ಅನೇಕ ವಿಧಾನಗಳಲ್ಲಿ ತನ್ಮೆಚ್ಚುಗೆಯು ಪಾಪದ ಮೂಲವಾಗಿದೆ,ಇದರ ಕುರಿತಾಗಿ ಒಂದು ಶಬ್ದಕೋಶವು 'ನಮ್ಮ ಸ್ವಂತಿಕೆಯ ವಿಚಾರದಲ್ಲಿ ಆಸಕ್ತಿಯನ್ನು ವಹಿಸುವುದು ಸ್ವಾರ್ಥ ಪ್ರೀತಿ, ವ್ಯರ್ಥ ಎಂದು ವಿವರಿಸುತ್ತದೆ., ಬಿದ್ದು ಹೋಗಿರುವ ಯಾವ ಮನುಷ್ಯನಾಗಲೀ ಇದಕ್ಕಿಂತ ಹೆಚ್ಚಿನ ಗುಣಗಳನ್ನು ತೋರಿಸಲು ಸಾಧ್ಯವಿದೆಯೇ?

ಆದರೆ ಈ ಲಕ್ಷಣಗಳು ಒಬ್ಬರು ಆಲೋಚಿಸುವುದಕ್ಕಿಂತ ಸಾಮಾನ್ಯವಾಗಿ ಕಾಣುತ್ತವೆ. ನೆಬುಕದ್ನೆಚರನು ಸೊಕ್ಕಿನಲ್ಲಿ ತನ್ನನ್ನು ತಾನು ಹೆಚ್ಚಿನವನೆಂದು ಆಲೋಚಿಸಿದನು. (ದಾನಿಯೇಲನು 4:30) ಫರಿಸಾಯರಲ್ಲೂ ಕೂಡ ಇಂತಹ ಆಕರ್ಷಣೆಯ ಆಲೋಚನೆಗಳು ಇದ್ದವು (ಲೂಕ 18:11, 12 ನೋಡಿರಿ) ನಾವು ಎಚ್ಚರಿಕೆಯನ್ನು ವಹಿಸದೆ ಹೋದರೆ ಆಸ್ತಿಯೂ ಕೂಡ ನಮ್ಮನ್ನು ಇಂತಹ ಬಲೆಗೆ ಬಿಳುವಂತೆ ಮಾಡುತ್ತದೆ.

1 ತಿಮೋಥಿ 6:10 ನ್ನು ಓದಿರಿ ಪೌಲನು ಇಲ್ಲಿ ಯಾವ ಅಪಾಯದ ಕುರಿತಾಗಿ ಎಚ್ಚರಿಸುತ್ತಿದ್ದಾನೆ.?

ಪೌಲನು ತಿಮೋಥಿಗೆ ಅನೇಕ ಕೆಟ್ಟ ಜನರ ಕುರಿತಾಗಿ ಎಚ್ಚರಿಕೆ ವಹಿಸಬೇಕೆಂದು ಉಪದೇಶಿಸುತ್ತಾನೆ. (2 ತಿಮೋಥಿ 3:1–5) ಇದರಲ್ಲಿ “ಹಣವನ್ನು ಪ್ರೀತಿಸುವವರು ಸೇರಿರುತ್ತಾರೆ” ಹಣದ ಪ್ರೀತಿಯು ನಮ್ಮಲ್ಲಿ ಅತಿಉತ್ಸಾಹವನ್ನು ಮತ್ತು ತನ್ಮೆಚ್ಚುಗೆಯನ್ನು ನಮ್ಮಲ್ಲಿ ಬೆಳೆಸಿಕೊಳ್ಳುವಂತೆ ಮಾಡುತ್ತದೆ. ಇದು ಯಾಕೆಂದರೆ ಭೌತಿಕವಾದವು ಜನರಲ್ಲಿ ತಮ್ಮ ಪ್ರಾಮುಖ್ಯತೆಯನ್ನು ಮತ್ತು ಹೇರಳವಾದ ಆಸ್ತಿಯನ್ನು ಬಯಸುವಂತೆ ಮಾಡುತ್ತದೆ. ಒಬ್ಬನ ಬಳಿಯಲ್ಲಿ ಬಹಳ ಹಣವಿದ್ದರೆ ಇತರರಿಗಿಂತ ಅವನನ್ನು ಅವನು ಹೆಚ್ಚಾಗಿ ಊಹಿಸಿಕೊಳ್ಳುವುದು ಬಹಳ ಸುಲಭ. ಯಾಕೆಂದರೆ ಎಲ್ಲರೂಕೂಡ ಶ್ರೀಮಂತರಾಗಲು ಬಯಸುತ್ತಾರೆ, ಆದರೆ ಕೆಲವರು ಅದರಲ್ಲಿ ಯಶಸ್ವಿಯಾಗುತ್ತಾರೆ. ಅದ್ದರಿಂದ ಶ್ರೀಮಂತರಿಗೆ ಸ್ವಾರ್ಥ ಚಿಂತನೆ, ಗರ್ವ ಮತ್ತು ಹೊಗಳಿಕೊಳ್ಳುವುದು ಬಹಳ ಸುಲಭ ಕೆಲಸವಾಗಿರುತ್ತದೆ.

ಫಿಲಿಪ್ಪಿಯವರಿಗೆ 2:3 ನ್ನು ಓದಿರಿ ಈ ವಚನವು ಭೌತಿಕವಾದವು ಮತ್ತು ನಮ್ಮಲ್ಲಿ ಹುಟ್ಟಿಸುವ ಗುಣಗಳು ಕ್ರೈಸ್ತಿಯ ಗುಣಗಳಿಗೆ ಹೇಗೆ ಭಿನ್ನವಾಗಿವೆ ಎಂದು ಅರ್ಥ ಮಾಡಿಕೊಳ್ಳಲು ಹೇಗೆ ಸಹಾಯ ಮಾಡುತ್ತದೆ.

**ಪಾಠ 1 ಭೌತಿಕವಾದದ ಪ್ರಭಾವ ಡಿಸೆಂಬರ್ 30–ಜನವರಿ 5**

**ಗುರುವಾರ ಜನವರಿ 4**

## ಭೌತಿಕವಾದ ಅಂತಿಮವಾದ ನಿಷ್ಫಲತೆ

ಅನೇಕರು ದೇವರನ್ನು ಪ್ರೀತಿಸುತ್ತಾರೆ. ಅವರ ಗುರುತು ಆತನ ಜೊತೆ ಎಷ್ಟು ಬಲವಾಗಿರುತ್ತದೆ ಎಂದರೆ ಲೋಕದ ವಸ್ತುಗಳ ಮೇಲಿನ ಮೋಹವು ಅವರನ್ನು ದೇವರ ಮೇಲಿನ ಪ್ರೀತಿಯಿಂದ ದೂರ ಮಾಡಲು ಸಾಧ್ಯವಿಲ್ಲ.

ಧರ್ಮೋಪದೇಶಕಾಂಡ 7:6, 1 ಪೇತ್ರ 2:9, ಯೋಹಾನ 15:5 ಮತ್ತು ಗಲಾತ್ಯ 2;20 ನ್ನು ಓದಿರಿ ದೇವರ ಆಸ್ತಿಗಳಾಗಿರುವುದರ ಅರ್ಥವೇನು, ನಾವು ಎಲ್ಲಿ ನಮ್ಮ ನಜವಾದ ಗುರುತನ್ನು ಕಂಡುಕೊಳ್ಳಬಹುದು?



“ನಾನು ದ್ರಾಕ್ಷೆ ಬಳ್ಳಿ ನೀವು ಕೊಂಬೆಗಳು ಒಬ್ಬನು ನನ್ನಲ್ಲಿಯೂ ನಾನು ಅವನಲ್ಲಿಯೂ ನೆಲೆಗೊಂಡಿದ್ದರೆ ಅವನೇ ಬಹಳ ಫಲ ಕೊಡುವನು ನೀವು ನನ್ನನ್ನು ಬಿಟ್ಟು ಏನೂ ಮಾಡಲಾರರಿ.” (ಯೋಹಾನ 15:5) ಸಂಪರ್ಕವು ನೇರ ಮತ್ತು ಸುರಕ್ಷಿತ. ಎಲ್ಲಾ ನಿಜವಾದ ವಿಧೇಯತೆ ಹೃದಯದಿಂದ ಬರುತ್ತದೆ. ಅದು ಕ್ರಿಸ್ತನೊಂದಿಗೆ ಕೆಲಸ ಮಾಡುತ್ತದೆ. ನಾವು ಒಪ್ಪಿದರೆ ಆತನು ನಮ್ಮ ಆಲೋಚನೆಗಳ ಮತ್ತು ಉದ್ದೇಶಗಳ ಜೊತೆಗೆ ತನ್ನನ್ನು ತಾನು ಗುರುತಿಸಿಕೊಳ್ಳುತ್ತಾನೆ, ಆದ್ದರಿಂದ ನಮ್ಮ ಹೃದಯ ಮತ್ತು ಮನಸ್ಸುಗಳನ್ನು ಆತನ ಚಿತ್ತದ ಅಧಿಕಾರಕ್ಕೆ ಒಪ್ಪಿಸೋಣ, ಇದರಿಂದ ಆತನಗೆ ವಿಧೇಯತೆ ತೋರುವಾಗ ನಾವು ನಮ್ಮ ಸ್ವಂತ ಉದ್ದೇಶಗಳನ್ನು ನೆರವೇರಿಸುವುದಿಲ್ಲ. **ಎಲೆನ್ ಜಿ ವೈಟ್ ಡಿಸೈರ್ ಆಫ್ ಎಜೆಸ್ ಪುಟ 668.**

ಇನ್ನೊಂದು ಕಡೆಯಲ್ಲಿ ಭೌತಿಕವಾದವು ನಮ್ಮ ಆಸ್ತಿಗಳ ಜೊತೆಗೆ ಗುರುತಿಸಿಕೊಳ್ಳುವಂತೆ ಮಾಡುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ ನಾವು ಯಾವುದನ್ನು ಹೊಂದಿದ್ದೇವೋ ಮತ್ತು ನಾವು ಏನು ಕೊಳ್ಳಬಹುದೋ ಅದರ ಜೊತೆಗೆ ನಮ್ಮನ್ನು ನಾವು ಗುರುತಿಸಿಕೊಳ್ಳುತ್ತೇವೆ. ಯಾಕೋಬನು ಇದರ ಕುರಿತಾಗಿ ನಮ್ಮನ್ನು ಎಚ್ಚರಿಸುತ್ತಾನೆ. “ನಿಮ್ಮ ಚಿನ್ನ ಬೆಳ್ಳಿಗಳು ಮಣ್ಣು ಹಿಡಿದಿವೆ ಆ ಮಣ್ಣೇ ನಮಗೆ ಸಾಕ್ಷಿಯಾಗಿದ್ದು ಬೆಂಕಿಯಂತೆ ನಿಮ್ಮ ಮಾಂಸವನ್ನು ನುಂಗಿಬೀಡುವುದು. ಅಂತ್ಯ ದಿವಸಗಳು ಬಂದರೂ ದ್ರವ್ಯವನ್ನು ಕೂಡಿಸಿ ಇಟ್ಟುಕೊಂಡಿದ್ದಿರಿ.” **ಯಾಕೋಬನು 5:3** ‘ಕೂಡಿಸಿ’ ಎಂಬ ಪದದ ಅರ್ಥವನ್ನು ನಾವು ಗಮನಿಸಿದರೆ ಕೂಡಿಸಿಕೊಂಡು ಮತ್ತು ಅದನ್ನು ಸುರಕ್ಷಿತಗೊಳಿಸುವುದಾಗಿದೆ. ಅದಕ್ಕಿಂತ ಮುಖ್ಯವಾಗಿ ಈ ಆಸ್ತಿ ಅದು ಕಡಿಮೆ ಇರಲಿ ಜಾಸ್ತಿ ಇರಲಿ ಅನೇಕರು ಅದರ ಜೊತೆಗೆ ತಮ್ಮನ್ನು ತಾವು ಗುರುತಿಸಿಕೊಳ್ಳುತ್ತಾರೆ. **(ಲೂಕ 12:19–21)**

ಭೌತಿಕವಾದವು ಒಂದು ರೀತಿಯಲ್ಲಿ ಗುರುತಿಸಿಕೊಳ್ಳುವುದರಲ್ಲಿ ಗೊಂದಲವನ್ನು ತರುವುದಾಗಿದೆ. ಮತ್ತೊಂದು ಅರ್ಥದಲ್ಲಿ ನಮ್ಮಲ್ಲಿ ಅನೇಕರು ನಮ್ಮ ಆಸ್ತಿಯ

ಜೊತೆಯಲ್ಲಿ ನಮ್ಮನ್ನು ನಾವು ಗುರುತಿಸಿಕೊಳ್ಳುತ್ತೇವೆ. ನಮ್ಮ ಆಸ್ತಿಯು ನಮ್ಮ ದೇವರಾಗುತ್ತದೆ. (ಮತ್ತಾಯ 6:19–21) ಇದರ ಕುರಿತಾಗಿ ಒಬ್ಬನು ಹೀಗೆ ಹೇಳುತ್ತಾನೆ. ನನ್ನ ವಸ್ತುಗಳಿಲ್ಲದೆ ನಾನು ಏನೂ ಅಲ್ಲ ನಾವು ಏನು ಹೊಂದಿದ್ದೆವೋ ಅದರ ಜೊತೆಯಲ್ಲಿ ನಮ್ಮನ್ನು ನಾವು ಗುರುತಿಸಿಕೊಳ್ಳುವುದು ಎಷ್ಟು ದುರದೃಷ್ಟಕರವಾದದ್ದು. ಇದು ಎಷ್ಟು ದುಃಖ, ಮೋಸಕರ ಅದರಲ್ಲೂ ನಮ್ಮನ್ನು ನಾವು ಕ್ರಿಸ್ತರು ಎಂದು ಹೇಳಿಕೊಳ್ಳುವವರ ಜೀವನವನ್ನು ಕೊನೆಗೆ ಹೇಗೆ ಹಾಳುಮಾಡುತ್ತದೆ ಎಂಬುದನ್ನು ನಾವು ಗಮನಿಸಬಹುದು. ನಮ್ಮನ್ನು ನಾವು ದೇವರೊಂದಿಗೆ ಅಥವಾ ನಮ್ಮ ಆಸ್ತಿಯ ಜೊತೆ ಗುರುತಿಸಿಕೊಳ್ಳುತ್ತೇವೋ? ಕೊನೆಗೆ ಇದರಲ್ಲಿ ಒಂದರ ಜೊತೆಗೆ ನಾವು ಯಶಸ್ವಿಯಾಗುತ್ತೇವೆ.

ನಿಮ್ಮ ಸ್ವಂತ ವಸ್ತುಗಳ ಜೊತೆಗೆ ನೀವು ಎಷ್ಟರ ಮಟ್ಟಿಗೆ ಗುರುತಿಸಿಕೊಳ್ಳುವಿರಿ?

**ಪಾಠ 1 ಭೌತಿಕವಾದದ ಪ್ರಭಾವ ಡಿಸೆಂಬರ್ 30–ಜನವರಿ 5**

**ಶುಕ್ರವಾರ ಜನವರಿ 5**

## ಹೆಚ್ಚಿನ ಚಿಂತನೆ:

ಶತ್ರುವು ಆತ್ಮಗಳನ್ನು ಬಹಳ ಕಡಿಮೆ ಬೆಲೆಗೆ ಕೊಂಡುಕೊಳ್ಳುತ್ತಿದ್ದಾನೆ. ನಮ್ಮನ್ನು ನೀವು ಶೂನ್ಯಕ್ಕೆ ಮಾರಿಕೊಂಡಿರುವಿರಿ, ಎಂಬುದು ದೇವರ ವಾಕ್ಯದ ಭಾಷೆಯಾಗಿದೆ. ಲೋಕದ ಆಸೆಗಾಗಿ ಒಬ್ಬನು ತನ್ನನ್ನು ತಾನು ಮಾರಿಕೊಳ್ಳುತ್ತಾನೆ, ಮತ್ತೊಬ್ಬನು ಹಣಕ್ಕಾಗಿ, ಬೇರೊಬ್ಬನು ತನ್ನ ಕೋರಿಕೆಗಳನ್ನು ತಿರಿಸಿ ಕೊಳ್ಳಲು ಮತ್ತೊಬ್ಬನು ಲೋಕದ ವಿನೋದಗಳಿಗೆ ಮಾರಿಕೊಳ್ಳುತ್ತಾನೆ. ಇಂತಹ ವ್ಯಾಪಾರ ಪ್ರತಿದಿನ ನಡೆಯುತ್ತದೆ. ಸೈತಾನನು ಕ್ರಿಸ್ತನ ರಕ್ತಕ್ಕೆ ಬದಲಾಗಿ ಅವರನ್ನು ಬಹಳ ಕಡಿಮೆ ಬೆಲೆ ಕೊಂಡುಕೊಳ್ಳುತ್ತಿದ್ದಾನೆ. ದೇವರು ಸಲ್ಲಿಸಿರುವ ಅಪಾರವಾದ ಬೆಲೆಯ ಪ್ರಾಮುಖ್ಯತೆಯನ್ನು ಅರಿಯದೆ ಅವರು ತಮ್ಮನ್ನು ತಾವು ಮಾರಿಕೊಳ್ಳುತ್ತಿದ್ದಾರೆ.? **ಎಲೆನ್ ಜಿ ವೈಟ್ ಸಭೆಗೆ ಸಮಾಲೋಚನೆಗಳು, ಸಂಪುಟ 5, ಪುಟ 133.**

ಭೌತಿಕವಾದ ಮೂಲಕ ಆತ್ಮಗಳನ್ನು ಕೊಳ್ಳುವುದು ಸೈತಾನನ ಉದ್ದೇಶವಾಗಿದೆ.ಇದು ಹೃದಯಕ್ಕೆ ಬಹಳ ಆಕರ್ಷಣೆಯಾಗಿ ಕಾಣುತ್ತದೆ. ಭೌತಿಕವಾದವು ಮಾತನಾಡುವುದಿಲ್ಲ, ಆದರೆ ಅದಕ್ಕೆ ಅನೇಕ ಭಾಷೆಗಳು ಗೊತ್ತು. ಅದಕ್ಕೆ ಶ್ರೀಮಂತರಿಗೆ ಮತ್ತು ಬಡವರಿಗೆ ತಾತ್ಕಾಲಿಕವಾದ ತೃಪ್ತಿಯನ್ನು ಹೇಗೆ ನೀಡುವುದು ಎಂದು ಗೊತ್ತು. ಇದರಿಂದ ಅವರು 'ನನಗೆ ಬೇಕಾದದ್ದು ಎಲ್ಲವೂ ಇಲ್ಲಿದೆ, ನಾನು ಯಾವುದರ ಕುರಿತಾಗಿ ಚಿಂತಿಸಬೇಕು' ಎಂದು ಹೇಳುವಂತೆ ಮಾಡುತ್ತದೆ. ಅದ್ದರಿಂದ ಭೌತಿಕವಾದವು ಮನಸ್ಸನ್ನು ಹಾಳು ಮಾಡುತ್ತದೆ, ಇದು ಜನರು ದೇವರನ್ನು ನಂಬುವ ಬದಲು ತಮ್ಮ ಸ್ವಂತ ವಸ್ತುಗಳ ಮೇಲೆ ನಂಬಿಕೆ ಇಡುವಂತೆ ಮಾಡುತ್ತದೆ. ಇದಕ್ಕೆ ಇರುವ ಔಷದ ಎಂದರೆ "ಪರಾಕ್ರಮದಿಂದಲ್ಲ, ಬಲದಿಂದಲ್ಲ, ನನ್ನ ಆತ್ಮದಿಂದಲೇ" ಎಂಬುದು ಸೇನಾದಿಶ್ವರನಾದ ಯೆಹೋವನ ನುಡಿ'(ಜೆಕರ್ಯ 4:6)ನಾವು ನಮ್ಮನ್ನು ದೇವರ ಅಧೀನಕ್ಕೆ ಒಪ್ಪಿಸಿಕೊಟ್ಟು ಆತನ ಆತ್ಮನ ಸಹಾಯದಿಂದ ನಡೆಸಲ್ಪಡಲು ತಿರ್ಮಾನಿಸಿದಾಗ ಭೌತಿಕವಾದವು ನಮ್ಮ ಮುಂದೆ ನಿಲ್ಲಲು ಸಾಧ್ಯವಾಗುವುದಿಲ್ಲ.



## ಚರ್ಚಿಸಬೇಕಾದ ಪ್ರಶ್ನೆಗಳು

1. ಈ ವಾರದ ಪಾಠದಲ್ಲಿ ಗಮನಿಸಿದ ಹಾಗೆ ನಾವು ಬಡವರಾಗಿದ್ದು ಅಥವಾ ಹಣವಿಲ್ಲದೆ ಮತ್ತು ಬೆಲೆಬಾಳುವ ವಸ್ತುಗಳು ಇಲ್ಲದೆ ಇದ್ದರೂ ಕೂಡ ಯಾವ ರೀತಿಯಲ್ಲಿ ಲೋಕದ ಆಸೆಗಳ ಅಪಾಯಗಳಿಗೆ ಸಿಲುಕಬಹುದು?

2. ಕೆಲವರು ಹೇಳುವ ಹಾಗೆ ನಾನು ಹಣದ ಕುರಿತಾಗಿ ಚಿಂತಿಸುವುದಿಲ್ಲ, ಹಣ ನನಗೆ ಏನೂ ಅಲ್ಲ (ಆದರೆ ಅನೇಕ ಬಾರಿ ಹೀಗೆ ಹೇಳುವವರ ಬಳಿಯಲ್ಲಿ ಸಾಕಷ್ಟು ಹಣವಿರುತ್ತದೆ.) ಆದರೆ ಯಾಕೆ ಅನೇಕ ಸಂದರ್ಭಗಳಲ್ಲಿ ಇದು ನಿಜ ವಾಗಿರುವುದಿಲ್ಲ. ಹಣಕಾಸು ಬಹಳ ಮುಖ್ಯ ಅದು ನಮ್ಮ ಜೀವನದಲ್ಲಿ ಮುಖ್ಯವಾದ ಪಾತ್ರ ವಹಿಸುತ್ತದೆ. ಆದರೆ ನಾವು ಹಣವನ್ನು ಹೇಗೆ ಹೊಂದಬಹುದು ಮತ್ತು ಸತ್ಯವೇದಕ್ಕೆ ಅನುಗುಣವಾಗಿ ಹಣವನ್ನು ಹೇಗೆ ಉಪಯೋಗಿಸಬಹುದು ಎಂಬುದು ಒಂದು ಪ್ರಶ್ನೆಯಾಗಿದೆ?

3. "ಭೂಲೋಕದಲ್ಲಿ ಗಂಟು ಮಾಡಿ ಇಟ್ಟುಕೊಳ್ಳಬೇಡಿರಿ ಇಲ್ಲಿ ಅಂತೂ ಅದು ನುಸಿಹಿಡಿದು ಕಿಲುಬು ಹತ್ತಿ ಕೆಟ್ಟು ಹೋಗುವುದು; ಇಲ್ಲಿ ಕಳ್ಳರು ಕನ್ನ ಕೊರೆದು ಕದಿಯುವರು. ಆದರೆ ಪರಲೋಕದಲ್ಲಿ ಗಂಟು ಮಾಡಿ ಇಟ್ಟು ಕೊಳ್ಳಿರಿ; ಅಲ್ಲಿ

ಅದು ನುಸಿ ಹಿಡಿದು ಕಿಲುಬು ಹತ್ತಿ ಕೆಟ್ಟು ಹೋಗುವುದಿಲ್ಲ. ಅಲ್ಲಿ ಕಳ್ಳರು ಕನ್ನಾ ಕೊರೆಯುವುದೂ ಇಲ್ಲ, ಕದಿಯುವುದೂ ಇಲ್ಲ. ನಿನ್ನ ಗಂಟು ಇದ್ದಲ್ಲಿಯೇ ನಿನ್ನ ಮನಸ್ಸೂ ಇರುವುದಷ್ಟೇ." (ಮತ್ತಾಯ 6:19–21) ಇದನ್ನು ಎಚ್ಚರಿಕೆಯಾಗಿ ಓದಿರಿ ಯೇಸು ಇಲ್ಲಿ ಏನು ಹೇಳುತ್ತಿದ್ದಾರೆ. ಭೌತಿಕವಾದ ವಿರುದ್ದವಾಗಿ ಹೋರಾಡಲು ಇಲ್ಲಿ ಯೇಸುವು ಹೇಳಿರುವ ಮಾತುಗಳು ಹೇಗೆ ಸಹಾಯ ಮಾಡುತ್ತವೆ?